# 3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ.

## ಸಿಸಿ. 5722/2008

| | |
|---|---|
| ಸಾಕ್ಷಿದಾರರ ಹೆಸರು | **Joachim Menezes** |
| ತಂದೆಯ ಹೆಸರು | **Late. Shabi Menezes** |
| ವಯಸ್ಸು | 59 ವರ್ಷ |
| ಉದ್ಯೋಗ | **Chartered Accountant.** |
| ವಾಸ | Sanjaya nagar, Bengaluru. |
| ಪ್ರಮಾಣೀಕರಿಸಿದ ದಿನಾಂಕ | 26/10/2023 |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ಈ ಪ್ರಕರಣದಲ್ಲಿ ಎ.ಎಸ್. ಕಾರ್ಗೋ ಮೂವರ್ಸ ಪ್ರೈ. ಲಿ., ನೆದ್ದರ ಕುರಿತು ನಾನು ಬುಕ್ಸ ಆಫ್ ಅಕೌಂಟ್ಸಗಳನ್ನು ಪರಿಶೀಲನೆ ಮಾಡಿ ದಿನಾಂಕ 31/03/2006 ರಂದು Certificate ನೀಡಿರುತ್ತೇನೆ. ಸದರಿ Certificate ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ ದಾಖಲೆ ನಾನು ನೀಡಿರುವ Certificate ಆಗಿದ್ದು, ಸದರಿ ದಾಖಲೆಯನ್ನು ನಿಪಿ-18 ಎಂದು, ಸಾಕ್ಷಿಯ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು. ಸದರಿ ಪ್ರಮಾಣ ಪತ್ರದೊಂದಿಗೆ ನಾನು ಸಹಿ ಮಾಡಿರುವ ಎರಡು ಲೆಡ್ಜರ ದಾಖಲೆಗಳು ಇರುತ್ತವೆ. ಅವುಗಳ ಮೇಲೆ ನನ್ನ ಸಹಿ ಇರುತ್ತದೆ. ಅವುಗಳನ್ನು ಕ್ರಮವಾಗಿ ನಿಪಿ-19 ಮತ್ತು 20 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-19(ಎ) ಮತ್ತು 20(ಎ) ಎಂದು ಗುರುತಿಸಲಾಯಿತು. ಅದರ ಜೊತೆಗೆ ಓಚರ್ ಗಳನ್ನು ನೋಡಿರುತ್ತೇನೆ, ಅವುಗಳನ್ನು ದೂರುದಾರರು ನೀಡಿರಬಹುದು.

**ಪಾಟೀ ಸವಾಲು : ಆರೋಪಿ ಪರ ಶ್ರೀ. ಸಿ.ಎನ್.ಡಿ. ವಕೀಲರಿಂದಃ**

2. ನಾನು 2003 ರಿಂದ 2008-09 ರವರೆಗೆ ಸದರಿ ಎ.ಎಸ್ ಕಾರ್ಗೋ ಮೂವರ್ಸ್ ಕಂಪನಿಯ ಇಂಟರನಲ್ ಆಡಿಟ್ ಮಾಡಿದ್ದೇನೆ. ಸದರಿ ಕಂಪನಿಯವರು ನೀಡಿರುವ ಓಚರ್ಸ್ ಮತ್ತು ಲೆಡ್ಜರ ಅಕೌಂಟ್ ಗಳನ್ನು ಪರಿಶೀಲನೆ ಮಾಡಿ ನಿಪಿ-18 ದೃಡೀಕರಣ ಪತ್ರ ನೀಡಿದೇನೆ. ನಿಪಿ-19 ಮತ್ತು 20 ದಾಖಲೆಗಳನ್ನು ದೂರುದಾರ ಕಂಪನಿಯವರೇ ನೀಡಿರುತ್ತಾರೆ ಎನ್ನುವುದು ಸರಿ. ಅದನ್ನು ನಾನು ಪರಿಶೀಲನೆ ಮಾಡಿದ್ದೇನೆ. ನಾನು ನೀಡಿರುವ ನಿಪಿ-18 ಪ್ರಮಾಣ ಪತ್ರವನ್ನು ಹೊರತು ಪಡಿಸಿ ಕಂಪನಿಯ ಒಳಗಡೆ ಏನು ನಡೆದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಖರ್ಚು ವೆಚ್ಚದ ಬಗ್ಗೆ ಗೊತ್ತಿದೆಯಾ ಎಂದರೆ ಈಗ 18 ವರ್ಷಗಳಾಗಿದ್ದರಿಂದ ದಾಖಲೆಗಳ್ನು ನೋಡದೆ ಹೇಳಲು ಬರುವುದಿಲ್ಲ. ನಿಪಿ-19 ಮತ್ತು 20 ದಾಖಲೆಗಳನ್ನು ಬುಕ್ಸ ಆಫ್ ಅಕೌಂಟ್ಸ ಗಳನ್ನು ನೋಡಿ ಸಮರೈಸ್ ಮಾಡಿ ನಾನೇ ಕಂಪನಿಯಲ್ಲಿ ತಯಾರಿಸಿದ್ದೇನೆ.

3. ಆಡಿಟ್ ನಡೆಯುತ್ತಿರುವ ಸಮಯದಲ್ಲಿ ಚಾಸಾ-1 ರವರು ಮನೆ ಕಟ್ಟುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಸದರಿ ಕಂಪನಿಯಲ್ಲಿ ಎಮ್.ಡಿ. ರವರ ಪರ್ಸನಲ್ ಸೆಕ್ರೆಟರಿ ಆಗಿ ಕೆಲಸ ಮಾಡುತ್ತಿದ್ದರು ಎಂಬುದು ಗೊತ್ತಿದೆ. ಆರೋಪಿ ಎಮ್.ಡಿ. ರವರ ಆದೇಶದ ಮೇರೆಗೆ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಹೇಳಲು ಬರುವುದಿಲ್ಲ, ಯಾಕೆಂದರೆ ಅದು ನನಗೆ ಗೊತ್ತಿಲ್ಲ. ಕಂಪನಿಗೆ ಸಹಾಯ ಮಾಡುವ ಸಲುವಾಗಿ ಅವರ ನಿರ್ದೇಶನದ ಮೇರೆಗೆ ನಿಪಿ-18 ನ್ನು ಸುಳ್ಳು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-19 ಮತ್ತು 20 ನ್ನು ಕಂಪನಿಯವರೇ ತಯಾರಿಸಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ಪ್ರತಿ ತಿಂಗಳು ಕಂಪನಿಯ ಅಕೌಂಟ್ಸ ಗಳನ್ನು ಪರಿಶೀಲನೆ ಮಾಡುತ್ತಿದ್ದೆ. ಪರಿಶೀಲನೆ ಮಾಡಿದಾಗ ಅಕೌಂಟ್ಸ ನಲ್ಲಿ ವ್ಯಾತ್ಯಾಸ ಕಂಡು ಬಂದರೆ ವರದಿ ಕೊಟ್ಟಿರುತ್ತೀರಾ ಎಂದರೆ ಬಹಳ ವರ್ಷಗಳಾಗಿದ್ದರಿಂದ ನನಗೆ ನೆನಪಿಲ್ಲ. ಕಂಪನಿಯ ನಿರ್ದೇಶನದ

ಮೇರೆಗೆ ನಿಪಿ-18 ನ್ನು ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕುರಿತು ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**